# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1884 |
| 2 | ಸದಸ್ಯರ ಹೆಸರು | : | ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 26-03-2020 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಗೃಹ ಇಲಾಖೆಯಲ್ಲಿ ನಾಗರೀಕ ಆರಕ್ಷಕ ಉಪ-ನಿರೀಕ್ಷಕರು (ಪಿಎಸ್‌ಐ ಸಿವಿಲ್), ನಾಗರೀಕ ಆರಕ್ಷಕ ನಿರೀಕ್ಷಕರು (ಪಿಐ-ಸಿವಿಲ್) ಮತ್ತು ನಾಗರೀಕ ಆರಕ್ಷಕ ಉಪಾಧೀಕ್ಷಕರು (ಡಿವೈಎಸ್‌ಪಿ ಸಿವಿಲ್) ಹುದ್ದೆಗಳಿಂದ ಮುಂಬಡ್ತಿ ನಂತರ ಸ್ಥಳ ನಿಯುಕ್ತಿಗೊಳಿಸುವಾಗ ಪಾಲಿಸುವ ಮಾರ್ಗಸೂಚಿ ಏನಾದರೂ ಇದೆಯೇ; ಇದ್ದರೆ, ಎಷ್ಟು ಅಧಿಕಾರಿಗಳನ್ನು ಕಾರ್ಯನಿರ್ವಾಹಕ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ; ಹಾಗೂ ಅನ್ಯ ಕರ್ತವ್ಯ ಮೇಲೆ ನಿಯುಕ್ತಿಗೊಳಿಸಿದೆ; ಕಾರ್ಯನಿರ್ವಾಹಕ ಹುದ್ದೆಯಿಲ್ಲದ ಸ್ಥಳಕ್ಕೆ ಎಷ್ಟು ಅಧಿಕಾರಿಗಳನ್ನು ನಿಯುಕ್ತಿಗೊಳಿಸಲಾಗಿದೆ; (ಕಾರಣದೊಂದಿಗೆ ಹುದ್ದೆವಾರು ಪೂರ್ಣ ಮಾಹಿತಿ ಒದಗಿಸುವುದು) | ಗೃಹ ಇಲಾಖೆಯಲ್ಲಿ ನಾಗರೀಕ ಆರಕ್ಷಕ ಉಪ-ನಿರೀಕ್ಷಕರು (ಪಿಎಸ್‌ಐ ಸಿವಿಲ್), ನಾಗರೀಕ ಆರಕ್ಷಕ ನಿರೀಕ್ಷಕರು (ಪಿಐ-ಸಿವಿಲ್) ಮತ್ತು ನಾಗರೀಕ ಆರಕ್ಷಕ ಉಪಾಧೀಕ್ಷಕರು (ಡಿವೈಎಸ್‌ಪಿ ಸಿವಿಲ್) ಹುದ್ದೆಗಳಿಂದ ಮುಂಬಡ್ತಿ ನಂತರ ಸ್ಥಳ ನಿಯುಕ್ತಿಗೊಳಿಸುವಾಗ ಸರ್ಕಾರದ ಆದೇಶ ಸಂಖ್ಯೆ: ಒಇ 111 ಪೊಸಇ 2014, ದಿ: 16.09.2014ರಲ್ಲಿನ ಮಾರ್ಗ ಸೂಚಿಯನ್ನು ಪಾಲಿಸಲಾಗುತ್ತಿದೆ.<br><br>ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಡಿವೈಎಸ್‌ಪಿ ವೃಂದದಲ್ಲಿ ಮುಂಬಡ್ತಿ ಹೊಂದಿ ಒಂದು ವರ್ಷಗಳ ಸೇವೆಯನ್ನು ಪೂರ್ಣಗೊಳಿಸದ ಯಾವುದೇ ಅಧಿಕಾರಿಯನ್ನು ಕಾರ್ಯನಿರ್ವಾಹಕ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸುವುದಿಲ್ಲ ಹಾಗೂ ಡಿವೈಎಸ್‌ಪಿ (ಸಿವಿಲ್) ಹುದ್ದೆಯಲ್ಲಿ ಒಬ್ಬರು ಅಧಿಕಾರಿಯನ್ನು ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಹುದ್ದೆಯಲ್ಲಿ ಒಬ್ಬರು ಅಧಿಕಾರಿ ಒಟ್ಟು 02 ಅಧಿಕಾರಿಗಳನ್ನು ಅನ್ಯ ಕರ್ತವ್ಯದ ಮೇಲೆ ಕಾರ್ಯನಿರ್ವಾಹಕ ಹುದ್ದೆಗೆ ಓಓಡಿ ಆಧಾರದ ಮೇರೆಗೆ ನಿಯುಕ್ತಿಗೊಳಿಸಲಾಗಿರುತ್ತದೆ. ವಿವರವನ್ನು ಅನುಬಂಧ-ಎ ನಲ್ಲಿ ಇರಿಸಿದೆ.<br><br>ಕಾರ್ಯನಿರ್ವಾಹಕ ಹುದ್ದೆಯಿಲ್ಲದ ಸ್ಥಳಕ್ಕೆ ನಿಯುಕ್ತಿಗೊಳಿಸಲಾದ ಅಧಿಕಾರಿಗಳ ವಿವರ ಈ ಕೆಳಕಂಡಂತಿರುತ್ತದೆ.<br><br>ಕ್ರ ಸಂ / ಹುದ್ದೆ / ಮುಂಬಡ್ತಿ ದಿನಾಂಕ / ಸಂಖ್ಯೆ<br>1. / ಪಿಐ (ಸಿವಿಲ್) / 19.08.2019 / 227<br>2. / ಡಿವೈಎಸ್‌ಪಿ (ಸಿವಿಲ್) / 17.07.2019 / 71<br><br>ಸದರಿ ಮೇಲ್ಕಂಡ ಸಂಖ್ಯೆಯ ಅಧಿಕಾರಿಗಳು ಕ್ರಮವಾಗಿ ಪಿಎಸ್‌ಐ (ಸಿವಿಲ್) ಹುದ್ದೆಯಿಂದ ಪಿಐ (ಸಿವಿಲ್) ಹುದ್ದೆಗೆ ಹಾಗೂ ಪಿಐ (ಸಿವಿಲ್) ಹುದ್ದೆಯಿಂದ ಡಿವೈಎಸ್‌ಪಿ (ಸಿವಿಲ್) ಹುದ್ದೆಗೆ ಮುಂಬಡ್ತಿ ಹೊಂದಿರುತ್ತಾರೆ. ಮೇಲ್ಕಂಡ ಹುದ್ದೆಗೆ ಮುಂಬಡ್ತಿ ಹೊಂದಿದ ಅಧಿಕಾರಿಗಳು ಕನಿಷ್ಠ ಒಂದು ವರ್ಷ ಕಾರ್ಯಕಾರ್ಯೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಬೇಕೆಂಬ ಮಾರ್ಗ ಸೂಚಿಯನ್ನು ಅನುಸರಿಸುತ್ತಿರುವುದರಿಂದ ಅವರುಗಳನ್ನು ಕಾರ್ಯನಿರ್ವಾಹಕ ಹುದ್ದೆಯಿಲ್ಲದ ಸ್ಥಳಕ್ಕೆ ನಿಯುಕ್ತಿಗೊಳಿಸಲಾಗಿರುತ್ತದೆ. |

<table>
<tr>
<td>ಆ</td>
<td>ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಾಹಕ ಹುದ್ದೆಯಲ್ಲಿ ನಾಗರೀಕ ಆರಕ್ಷಕ ನಿರೀಕ್ಷಕರಿಂದ ಆರಕ್ಷಕ ಅಧೀಕ್ಷಕರು (ನಾನ್ ಐಪಿಎಸ್) ಹುದ್ದೆಯವರಿಗೆ ಸ್ಥಳ ನಿಯುಕ್ತಿಗೊಳಿಸಿದ ನಂತರ ಒಂದೇ ಸ್ಥಳದಲ್ಲಿರಲು ಕನಿಷ್ಠ ಅವಧಿ ನಿಗಧಿಪಡಿಸಲಾಗಿದೆಯೇ; ಹೌದಾದಲ್ಲಿ, ಏಪ್ರಿಲ್–2019 ರಿಂದ ಜನವರಿ–2020ರ ವರೆಗೆ ಅವಧಿಪೂರ್ವ ಕಾರ್ಯನಿರ್ವಾಹಕ ಹುದ್ದೆಗಳಲ್ಲಿದ್ದ ಎಷ್ಟು ಅಧಿಕಾರಿಗಳನ್ನು ಆಕಾಲಿಕ ವರ್ಗಾವಣೆ ಮಾಡಲಾಗಿದೆ; ಮಾಡಲಾಗಿದ್ದಲ್ಲಿ, ಅವರುಗಳ ಹೆಸರು, ಹುದ್ದೆ, ವರ್ಗಾವಣೆ ಮಾಡಲಾದ ಸ್ಥಳ ಹಾಗೂ ಕಾರಣಗಳೇನು; (ಹುದ್ದೆವಾರು ಪ್ರತ್ಯೇಕ ಸಂಪೂರ್ಣ ವಿವರ ಒದಗಿಸುವುದು)</td>
<td>ಹೌದು, ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಾಹಕ ಹುದ್ದೆಯಲ್ಲಿ ನಾಗರೀಕ ಆರಕ್ಷಕ ನಿರೀಕ್ಷಕರಿಂದ ಆರಕ್ಷಕ ಅಧೀಕ್ಷಕರು (ನಾನ್ ಐಪಿಎಸ್) ಹುದ್ದೆಯವರೆಗೆ ಕಾರ್ಯನಿರ್ವಾಹಕ ಹುದ್ದೆಯಲ್ಲಿ ಒಂದು ವರ್ಷ ಕನಿಷ್ಠ ಅವಧಿಯನ್ನು ಕರ್ನಾಟಕ ಪೊಲೀಸ್ (ತಿದ್ದುಪಡಿ) ಕಾಯ್ದೆ 2013 ರ ಕಂಡಿಕೆ 20 (ಎಫ್) ರಲ್ಲಿ ನಿಗಧಿ ಪಡಿಸಲಾಗಿರುತ್ತದೆ. ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಏಪ್ರಿಲ್–2019 ರಿಂದ ಜನವರಿ–2020ರ ವರೆಗೆ ಅವಧಿಪೂರ್ವ ಕಾರ್ಯನಿರ್ವಾಹಕ ಹುದ್ದೆಗಳಲ್ಲಿದ್ದ ಅಧಿಕಾರಿಗಳನ್ನು ಆಕಾಲಿಕ ವರ್ಗಾವಣೆ ಮಾಡಿದ ಅಧಿಕಾರಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ ಸಂ</th><th>ಹುದ್ದೆ</th><th>ಸಂಖ್ಯೆ</th></tr>
<tr><td></td><td>ಎಸ್‌ಪಿ (ನಾನ್–ಐಪಿಎಸ್)</td><td>00</td></tr>
<tr><td></td><td>ಡಿವೈಎಸ್‌ಪಿ (ಸಿವಿಲ್)</td><td>00</td></tr>
<tr><td></td><td>ಪಿಐ (ಸಿವಿಲ್)</td><td>02</td></tr>
</table>
ಹುದ್ದೆವಾರು ವಿವರವನ್ನು ಅನುಬಂಧ–ಬಿ ನಲ್ಲಿ ಇರಿಸಲಾಗಿದೆ.</td>
</tr>
<tr>
<td>ಇ</td>
<td>ಕಾರ್ಯನಿರ್ವಾಹಕ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಕನಿಷ್ಠ ಅವಧಿ ನಿಗಧಿಪಡಿಸಿ ತೀರ್ಪು ಹೊರಡಿಸಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ; ಇದ್ದಲ್ಲಿ, ತೀರ್ಪಿನನ್ವಯ ವರ್ಗಾವಣೆ ಮಾರ್ಗಸೂಚಿಯನ್ನು ಪಾಲಿಸಲಾಗುತ್ತಿದೆಯೇ? (ವಿವರವಾದ ಮಾಹಿತಿ ಒದಗಿಸುವುದು)</td>
<td>ಹೌದು,<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 310 / 1996 – ಪ್ರಕಾಶ್ ಸಿಂಗ್ ಮತ್ತು ಇತರರ ವಿರುದ್ಧ ಭಾರತ ಸರ್ಕಾರ ಮತ್ತು ಇತರರು ಪ್ರಕರಣದಲ್ಲಿ ದಿನಾಂಕ: 22.09.2006ರ ತೀರ್ಪಿನ ಅಂಶಗಳಲ್ಲಿ ಕಾರ್ಯನಿರ್ವಾಹಕ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ ಮಾನ್ಯ ನ್ಯಾಯಾಲಯವು ನೀಡಿರುವ ಆದೇಶದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 38 ಶಾಸನ 2012, ದಿನಾಂಕ: 09.08.2012 ರಲ್ಲಿ ಕರ್ನಾಟಕ ಪೊಲೀಸ್ ಕಾಯ್ದೆಯ ಕಂಡಿಕೆ 20 (ಎಫ್)ಗೆ ತಿದ್ದುಪಡಿ ಮಾಡಿ ಪೊಲೀಸ್ ಅಧಿಕಾರಿಗಳ ಕಾರ್ಯನಿರ್ವಾಹಕ ಹುದ್ದೆಗಳಲ್ಲಿ ಪದಾವಧಿಯನ್ನು ಕನಿಷ್ಠ 1 ವರ್ಷಕ್ಕೆ ನಿಗಧಿ ಪಡಿಸಿ ಆದೇಶಿಸಲಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.</td>
</tr>
</table>

**ಸಂಖ್ಯೆ: ಒಇ 23 ಪಿಇಎಂ 2020**

**(ಬಸವರಾಜ ಬೊಮ್ಮಾಯಿ)**
ಗೃಹ ಸಚಿವರು